ಡಾ;ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್:– ಸೋಮವಾರ 10–00ಗಂಟೆಗೆ ಅಸೆಂಬ್ಲಿ ಕರೆಯಿರಿ.

ಶ್ರೀ.ಕೆ.ಎಸ್.ಈಶ್ವರಪ್ಪ:– 10–00 ಗಂಟೆಗೆ ಅಸೆಂಬ್ಲಿ ಕರೆಯಿರಿ, 10–00 ಗಂಟೆಗೆ ನೀವಂತೂ ಬನ್ನಿ ಯಾರೂ ಬರಲಿ ಬಾರದಿರಲಿ.

ಶ್ರೀ.ಟಿ.ಬಿ.ಜಯಚಂದ್ರ:– ನಾನು 10–00 ಗಂಟೆಗೆ ಬರುತ್ತೇನೆ.

ಶ್ರೀ.ಕೆ.ಎಸ್.ಈಶ್ವರಪ್ಪ:– ಹೀಗೆ ಮಾಡೋಣ.10–00ಗಂಟೆಗೆ ಇವರು ಬಂದು ಶುರು ಮಾಡಲಿ. ಉಳಿದವರು ಬರುವಷ್ಟರಲ್ಲಿ ಇವರು ಮುಗಿಸುತ್ತಾರೆ.

ಶ್ರೀ.ಟಿ.ಬಿ.ಜಯಚಂದ್ರ:– ಆಯಿತು. ನಾಳೆ ನಮ್ಮ ಊರಿಗೆ ಬರುತ್ತಿದ್ದಾರೆ ನನಗೆ ಜಾಸ್ತಿ ದುಡ್ಡು ಕೊಡುತ್ತೇನೆಂದು ಹೇಳಿದರೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ.

ಶ್ರೀ.ಕೆ.ಎಸ್.ಈಶ್ವರಪ್ಪ:– ಏನೂ ಕೊಡುವುದಿಲ್ಲ. ನಾಳೆಯವರೆಗೆ ಮಾತನಾಡಿ.

(ಗೊಂದಲ)

ಶ್ರೀ.ಕೆ.ಎಸ್.ಈಶ್ವರಪ್ಪ:– ಈ ಮಾತಿಗೂ ದುಡ್ಡಿಗೂ ಸಂಬಂಧ ತರಬೇಡಿ. ಇಲ್ಲ ನಾನು ತಮಾಷೆ ಮಾಡಿದಷ್ಟೆ. ನೀವು ಬಹಳ ಅನುಭವಸ್ಥರು ಇದ್ದೀರಿ, ನೀವು ಖಂಡಿತ ಮಾತನಾಡಬೇಕು, ಸೋಮವಾರ ಬೆಳಗ್ಗೆ 10–00 ಗಂಟೆಗೆ ಬಂದು ನೀವು ಶುರು ಮಾಡಿ. ಉಳಿದ ಸದಸ್ಯರು ಬರುವಷ್ಟರಲ್ಲಿ ನಿಮ್ಮದು ಮುಗಿದರೆ ಅನುಕೂಲವಾಗುತ್ತದೆ ಅಷ್ಟೆ.

ಶ್ರೀ.ಟಿ.ಬಿ.ಜಯಚಂದ್ರ:– ಮಾನ್ಯ ಅಧ್ಯಕ್ಷರೆ, ನನ್ನದೇನೂ ಜಾಸ್ತಿಯಿಲ್ಲ. ಆದ್ದರಿಂದ, ಸೋಮವಾರ ಬೆಳಿಗ್ಗೆ 10–00 ಗಂಟೆಗೆ ನನಗೆ ಅವಕಾಶ ಕೊಟ್ಟರೆ ಬೇಗ ಕನ್‌ಕ್ಲೂಡ್ ಮಾಡುತ್ತೇನೆ. ಸೋಮವಾರ ಅವರೆಲ್ಲರು ಬರುವುದರಿಂದ ಕೆಲವು ವಿಚಾರಗಳನ್ನು ಅವರಿಗೆ ಹೇಳುವುದಕ್ಕೆ ಸಾಧ್ಯವಾಗುತ್ತದೆ. ಆದುದರಿಂದ, ಸೋಮವಾರ ಬೆಳಿಗ್ಗೆ ಮುಂದುವರಿಸುತ್ತೇನೆ.

ಅಧ್ಯಕ್ಷರು:– ಆಯಿತು. ಈಗ ಒಂದು ಪ್ರಕಟಣೆ.

3. ಪ್ರಕಟಣೆ

ಸದನದ ಕಲಾಪವನ್ನು ಮುಂದುವರೆಸುವುದರ ಬಗ್ಗೆ

ದಿನಾಂಕ:19–07–2012 ರಂದು ನಡೆದ ಕಾರ್ಯಕಲಾಪಗಳ ಸಲಹಾ ಸಮಿತಿಯ ಸಭೆಯಲ್ಲಿ ಈ ಕೆಳಕಂಡ ತೀರ್ಮಾನಗಳನ್ನು ಕೈಗೊಳ್ಳಲಾಗಿದೆ.

ಸದನದ ಕಲಾಪವನ್ನು ದಿನಾಂಕ 02-08-2012ರವರೆಗೆ ಮುಂದುವರಿಸಲಾಗಿದೆ.

ದಿನಾಂಕ:- 27-07-2012 ರಂದು ಬೆಳಿಗ್ಗೆ ಸನ್ಮಾನ್ಯ ಮುಖ್ಯಮಂತ್ರಿ-ಯವರು ಅನುದಾನ ಬೇಡಿಕೆಗಳ ಮೇಲಿನ ಸಾಮಾನ್ಯ ಚರ್ಚೆಗೆ ಉತ್ತರಿಸುವರು.

ಶ್ರೀ.ಟಿ.ಬಿ.ಜಯಚಂದ್ರ:- ಅಸೆಂಬ್ಲಿ ಹೇಗೋ extend ಆಗುತ್ತಿರುವು-ದರಿಂದ ಮೂರನೇ ತಾರೀಖಿನವರೆಗೆ ಮಾಡಿ ಬಿಟ್ಟರೆ problem ಇರುವುದಿಲ್ಲ.

ಶ್ರೀ.ಕೆ.ಎಸ್.ಈಶ್ವರಪ್ಪ:- ಬೇಡ ಬೇಡ.

ಅಧ್ಯಕ್ಷರು:- ಎರಡನೇ ತಾರೀಖಿನವರೆಗೆಂದು ಈಗಾಗಲೇ ತೀರ್ಮಾನವಾಗಿದೆ. ಈಗ ಸದನವನ್ನು ಸೋಮವಾರ ಬೆಳಗ್ಗೆ 10-00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 2 ಗಂಟೆ 21 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ:23-07-2012 ರಂದು ಸೋಮವಾರ ಬೆಳಿಗ್ಗೆ 10-00 ಗಂಟೆಗೆ ಸೇರುವಂತೆ ನಿಶ್ಚಯಿಸಿತು).